ದಾರಿಯಲ್ಲಿ ಖಂಡೋಬಣ್ಣನ ಅಮೃತಕ್ಕೆ ಸಮಾನವಾದ ಚಹ ಇದೆ. ಕುಡಿಯೋಣವೇ? ಎಂದ. ಅವಳು ವೈನಾಟ್ ಎಂದು ವಾಚ್ ನೋಡುತ್ತ ಚಾಲಕನಿಗೆ ಗಾಡಿ ನಿಲ್ಲಿಸಲು ಹೇಳಿದಳು. ಅವಳ ಕೈಗಳಲ್ಲಿ ಇದ್ದದ್ದು ಇವನು ಆಕೆಯ ಹುಟ್ಟುಹಬ್ಬಕ್ಕೆ ಕೊಟ್ಟ ಅರಿವಿನ ಕುರುಹಾಗಿದ್ದ ವಾಚ್ ಒಂದೆ. ಅದರಿಂದ ಕೊಂಚ ಇವನಿಗೆ ಸಮಾಧಾನವಾಯಿತು. ಖಂಡೋಬಾನ ಹೆಸರು ಹೊಳೆದ ಕ್ಷಣವೇ ಅವಳ ಕಿವಿ ನಿಮಿರುತ್ತವೆ ಎಂದುಕೊಂಡಿದ್ದ. ಆದರೆ, ಆಕೆಯ ವರ್ತನೆಯಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಯುನಿವರ್ಸಿಟಿಯ ಕ್ಯಾಂಟೀನ್ ಕಾಂಟ್ರಾಕ್ಟ್ ಹಿಡಿದಿದ್ದ ಖಂಡೋಬಾ ಇವರಿಬ್ಬರ ಪ್ರೇಮಕ್ಕೆ ಆತನ ಕ್ಯಾಂಟೀನಿನಲ್ಲಿ ಅಗಾಧವಾದ ಸ್ಪೇಸ್ ಕೊಟ್ಟಿದ್ದ. ಆದರೆ, ಇಂದು ಆಗಲೇ ಮುದುಕನಾಗಿದ್ದಾನೆ ಎನ್ನಿಸಿತು. ಹಿಂದೆ ಅವನ ಹೋಟೆಲಿನಲ್ಲಿ ಪಾಗುಂಟಿ ಎನ್ನುವ ಬಾಲಕನಿದ್ದ. ಅವನು ಇಲ್ಲಿಯೇ ಇದ್ದಾನೆ. ಕೃಶದೇಹದ ಈ ಪಾಗುಂಟಿಯೇ ಅವಳ ಮೊದಲ ಪ್ರೇಮ ಪತ್ರವನ್ನು ಇವನಿಗೆ ಮುಟ್ಟಿಸಿದ ರಾಯಭಾರಿಯಾಗಿದ್ದ. ಖಂಡೋಬ ಇಬ್ಬರ ಪರಿಚಯ ಹಿಡಿದು ಬನ್ನಿ ಬನ್ನಿ ಎಂದ. ಅವನಿಗೆ ಇವರಿಬ್ಬರು ಬೇರೆಯಾದ ರಾಮಾಯಣ ಆಗಲೇ ತಿಳಿದಿತ್ತು. ಆದರೂ, ಇಬ್ಬರೂ ಕೂಡಿ ಬಂದಿದ್ದು ಆಶ್ಚರ್ಯವಾಗಿತ್ತು. ಬಬಿತಾಳನ್ನು ನೋಡಿ, ಮತ್ತೆ ಮತ್ತೆ ದಿಟ್ಟಿಸಿ ತಂಗಿಯವರಾ ಸರ್ ಎಂದು ಗುರುತಿಸಿದ. ಹೌದು ಎನ್ನುವಂತೆ ಇವನು ಸಮ್ಮತಿಸಿದ. ಅಂದು ತಮ್ಮಿಬ್ಬರ ಪ್ರೇಮಪರ್ವಕ್ಕೆ, ಸಹಾಯಕನಾಗಿದ್ದು ಮತ್ತು ಇವರ ಮದ್ಯ ಉದ್ಭವಿಸುವ, ಸಣ್ಣ ಪುಟ್ಟ ಮನಸ್ತಾಪಗಳನ್ನು ಖಂಡೋಬಾನೆ ಬಗೆಹರಿಸುತ್ತಿದ್ದ. ಆದರೆ, ಆಕೆಯ ನಿರ್ಲಿಪ್ತತೆ ಇಂದು ತಾರಕಕ್ಕೇರಿತ್ತು. ಖಂಡೋಬನನ್ನು ಆಕೆ ಗಾಢವಾಗಿ ಗುರುತಿಸದಾಗಿದ್ದಳು ಪಾಗುಂಟಿ ಅಲ್ಲೆ ಬಂದು ನಿಂತುಕೊಂಡ. ಅವನ ದೇಹದ ರಚನೆ, ಶಹಬಾದ್ ವಾಡಿಯ ಕಲ್ಲಿನ ಕೋರೆಗಳ ಸಂರಚನೆಯಂತೆ ಮಾರ್ಪಾಟಾಗಿತ್ತು. ಹಿಂದೆ ಪಾಗುಂಟಿ ಎಂಬ ವಾನರ ಚಡ್ಡಿ ಹಾಕಿಕೊಂಡು 'ಏಮ್‌ಸರ್' ಎಂದು ಓಡಾಡುತ್ತಿದ್ದವ ಹೀಗೇಕೆ ಆಗಿದ್ದಾನೆ ಎನ್ನಿಸಿತು.



ಅವರು ಇವರಿಬ್ಬರ ಅನೇಕ ಪ್ರೇಮ ಘಟನೆಗಳನ್ನು ನೆನಪಿಸಿ ಮೆಲುಕು ಹಾಕಿ ಸಂಭ್ರಮಿಸಿದರು. ಆಕೆ ಇವೆಲ್ಲವೂ ಕ್ಷುಲ್ಲಕವೆಂಬಂತೆ ನೋಡಿ ಲ್ಯಾಪ್ ಟಾಪಿನಲಿ ತಲ್ಲೀನಳಾದಳು.

ಮತ್ತೆ ಇನ್ನೋವಾ ವಾಡಿಯತ್ತ ಪ್ರಯಾಣ ಬೆಳೆಸಿತು. ಇವರಿಬ್ಬರನ್ನು ಅವಳು ಅಷ್ಟಾಗಿ ನೆನಪಿನಲ್ಲಿ ಇಟ್ಟುಕೊಂಡಂತೆ ಕಾಣಲಿಲ್ಲ. 'ಹೌದು. ಇವರ ಕ್ಯಾಂಟೀನಿನಲ್ಲಿ ನಾವು ಸಾಕಷ್ಟು ಸಲ ಟೀ ಮತ್ತು ಉಪಾಹಾರ ಮಾಡುತ್ತಿದ್ದೆವು' ಮಾತ್ರ ಅಂದಳು. ಇವಳು ಪ್ರಜ್ಞಾಪೂರ್ವಕವಾಗಿ ನೆನಪಿನಲ್ಲಿ ಇಟ್ಟುಕೊಳ್ಳಲಾರದ ಸ್ಥಿತಿಗೆ ತಲುಪಿರುವಳೋ ಅಥವಾ ಅಭಿಜ್ಞಾನದ ಕೊರತೆಯೋ? 'ನೀನು ಎಲ್ಲವನ್ನು ಮರೆತುಬಿಟ್ಟೆ' ಎಂದ. ಇನ್ನೋವಾ ಚಾಲಕನಿಗೆ ಯಾಕೋ ಇವನ ಮುಖ ನೋಡಬೇಕೆನಿಸಿತೇನೋ. ಮೂರು ಸಲ ತಿರುಗಿ ನೋಡಿದ. ಎಲ್ಲವನ್ನು ಮರೆತಿರುವೆ ಎನ್ನುವ ಮಾತು ಕೇಳಿ ಅವಳ ಕಂಗಳಲಿ ನೀರು ಜಿನುಗಿತೋ ಅಥವಾ ವಾಡಿಯ ರಾಜಮಾರ್ಗದ ದೂಳು ಅವಳ ಕಣ್ಣಲಿ ನೀರುತರಿಸಿತೋ ಗೊತ್ತಿಲ್ಲ. 'ಡ್ರೈವರ್ ಕಿಡಕಿ ಹಾಕು,ದೂಳು ಕಣ್ಣಲ್ಲಿ ಹೋಗ್ತಾ ಇದೆ' ಎಂದು ಚಾಳೀಸು ತೆಗೆದು ಒರೆಸಿ ಮತ್ತೆ ಹಾಕಿಕೊಂಡಳು. ವಾಡಿ ಸುಮಾರು ಇಪ್ಪತ್ತು ಕಿ.ಮೀ. ದೂರವಿರಬಹುದು. ದಾರಿಯಲ್ಲಿ ದೂಳೋ ದೂಳು. ಸೂರ್ಯನ ಬೆಳಕಿನಲ್ಲಿ ದೂಳು ಬಡಿದುಕೊಂಡು ಮೂವಿಂಗ್ ಕಲಾಕೃತಿಗಳಂತೆ ಕೆಲಸ ಮಾಡುತ್ತಿರುವ ಜನರು. ಸಾವಿರಾರು ಬಾವಿಗಳಾಕೃತಿಯ ತಗ್ಗುಗಳು, ಅಲ್ಲಲ್ಲಿ ತಗ್ಗುಗಳ ಆಳದಿಂದಲೇ ಜಿಗಿದ ನೀರ್ ಜಲ, ಒಂದು ಕಡೆ ಇನ್ನೂರು ಚದುರ ಅಡಿ ಅಳತೆಯ ಒಂದು ತಗ್ಗು ಅದರ ತುಂಬಾ ನೀರು. ಮಧ್ಯದಲಿ ಒಂದು ಗುಡ್ಡದಂತೆ ಮೇಲೆದ್ದ ಮಣ್ಣಿನ ದಿನ್ನೆ. ಅದರ ಮೇಲೊಂದು ಮನೆ. ಅದನ್ನು ನೋಡಿದೊಡನೆ ಅವಳಿಗೆ ಆಶ್ಚರ್ಯವಾಯಿತು, ಅಯ್ಯೊ ನೀರಿನ ಮಧ್ಯ ಇರುವ ಈ ಗರುಡಗಂಬದಂತಹ ಮನೆಗೆ ಹೇಗೆ ಹೋಗುತ್ತಾರೆ. ದೇವು ನಾವು ಇಂಥ ಮನೆಯಲ್ಲಿ ಇದ್ದರೆ ನಿಜವಾಗಿಯೂ ನಮ್ಮಿಬ್ಬರನ್ನು ಯಾರೂ